# ನಮ್ಮೂರ ಸರ್ಕಾರಿ ಪ್ರಾಥಮಿಕ ಶಾಲೆ

**ಕರೀಗೌಡ**

ಕಲೆ: ಸಂತೋಷ್ ಸಸಿಹಿತ್ಲು

ಜುಲೈ ಇಪ್ಪತ್ತೊಂದು ನಾನು ಹುಟ್ಟಿದ ದಿನ. ಸಾಮಾಜಿಕ ಮಾಧ್ಯಮಗಳ ಪ್ರಭಾವಳಿ ವಿಸ್ತರಿಸಿದಂತೆ ಹುಟ್ಟಿದ ಹಬ್ಬದ ಆಚರಣೆಗಳು ಹೆಚ್ಚಾಗುತ್ತಿವೆ. ಸ್ನೇಹಿತರ 'ಹ್ಯಾಪಿ ಬರ್ತಡೆ' ಎಂಬ ಆಶೀರ್ವಾದಗಳು, ಹಾರೈಕೆ, ಶುಭಾಶಯಗಳು ಸಿಕ್ಕವು. ಕೆಲಸದ ನಿಮಿತ್ತ ಹೊರಗೆ ಹೋಗಿ, ಮನೆಗೆ ಬಂದಾಗ ರಾತ್ರಿ ಹನ್ನೊಂದಾಗಿತ್ತು. ಅಲ್ಲಿ ಸೋದರ ಸಂಬಂಧಿ ಲಕ್ಷ್ಮಿ ಪುತ್ರ ಸಾಹುಕಾರ್ ರೇವಣ್ಣರವರು ಕುಟುಂಬ ಸಮೇತ ತಂದ ಬಿರಿಯಾನಿ ತಿಂದು ಮುಗಿಸುವಷ್ಟರಲ್ಲಿ 'ನಿಮ್ದು ಜುಲೈನಲ್ಲಿ ಹುಟ್ಟಿದಬ್ಬ. ಇದು ನೀವು ಹುಟ್ಟಿದ ದಿನವೊ? ನಿಮ್ಮ ಮೇಷ್ಟ್ರು ಫಿಕ್ಸ್ ಮಾಡಿದ ದಿನವೊ' ಅಂದ್ರು. ನಮ್ಮ ರೇವಣ್ಣ ನನಗಿಂತ ಐದಾರು ವರ್ಷ ಹಿರಿಯರು. ಸರ್ಕಾರಿ ಶಾಲೆಯ ಪ್ರಾಡಕ್ಟೆ.

ನಾನು ಮೊದಲು ಸೇರಿದ್ದು ನಮ್ಮೂರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ. ಬೇರೆ ಅವಕಾಶ ಇರಲಿಲ್ಲ. ಊರಿನಲ್ಲಿ ಇದ್ದಿದ್ದು ಅದೊಂದೆ ಶಾಲೆ. ಸರ್ಕಾರಿ ನೌಕರಿಗೆ ಸೇರಿದ ಹೊಸದರಲ್ಲಿ ಶಾಲೆ ದಾಖಲಾತಿ ದೃಢೀಕರಣ ಪತ್ರ ಪಡೆಯಲು ಹೋಗಿದ್ದೆ. ನನ್ನ ಜೊತೆ 1970ನೇ ಇಸವಿಯಲ್ಲಿ ಒಂದನೇ ತರಗತಿಗೆ ಸೇರಿದವರು ಹದಿನೈದು ಮಂದಿ. ಈಗಿನಂತೆ ಒಂದನೇ ತರಗತಿ ಪ್ರವೇಶಕ್ಕೆ ಐದು ವರ್ಷ ಹತ್ತು ತಿಂಗಳಾಗಿರಬೇಕು ಎಂಬ ನಿಯಮವಿರಲಿಲ್ಲ. ನಾವೆಲ್ಲಾ ಬಲಗೈಯಿಂದ ತಲೆಯ ಮೇಲಿಂದ ಬಾಗಿಸಿ ಎಡ ಕಿವಿ ಹಿಡಿದರೆ ಒಂದನೇ ತರಗತಿಗೆ ಸೇರಲು ಪಾಸ್ ಎಂದರ್ಥ. ಕೈ ಮೋಟಾಗಿದ್ದರೆ ಶಾಲೆ ಪ್ರವೇಶಾತಿ ಒಂದು ವರ್ಷ ಮುಂದಕ್ಕೆ ಹೋಗುತ್ತಿತ್ತು.

ಶಾಲೆಗೆ ಸೇರಿದ ಹದಿನೈದು ಮಂದಿಯಲ್ಲಿ ಇಬ್ಬರನ್ನು ಹೊರತುಪಡಿಸಿದರೆ ಉಳಿದವರೆಲ್ಲರೂ ಜುಲೈನಲ್ಲಿ ಜನಿಸಿದವರು. ನಮ್ಮ ಮೇಷ್ಟ್ರು ಮೊದಲ ಎಂಟು ಮಂದಿಯ ಪ್ರವೇಶಾತಿ ಪಡೆದವರಿಗೆಲ್ಲ ಜುಲೈ 1970 ಜನ್ಮ ದಿನಾಂಕ ಇಟ್ಟರು. ಒಂಬತ್ತರಿಂದ ಹದಿನೈದರವರೆಗಿನ ಕ್ರಮಸಂಖ್ಯೆಯವರೆಗೆ ಏಪ್ರಿಲ್‌ನಿಂದ ಆಗಸ್ಟ್ 1971 ಜನ್ಮದಿನಾಂಕ ಇಟ್ಟರು. ಅದರಲ್ಲಿ ನನ್ನ ಕ್ರಮಸಂಖ್ಯೆ ಎಂಟು. ನನ್ನ ಕ್ರಮಸಂಖ್ಯೆ ಒಂಬತ್ತಾಗಿದ್ದರೆ ಸರ್ಕಾರಿ ಸೇವೆಯಲ್ಲಿ ಇನ್ನೂ ಒಂದು ವರ್ಷ ಹೆಚ್ಚಿನ ಸೇವೆ ಸಲ್ಲಿಸಬಹುದಿತ್ತು. ನಮ್ಮ ಮೇಷ್ಟ್ರು ಮನಸ್ಸು ಮಾಡಲಿಲ್ಲ ಅಷ್ಟೆ.

ನನ್ನಣ್ಣ ಹುಟ್ಟಿದ್ದು 1969ನೇ ಇಸವಿಯಲ್ಲಿ. ನಂತರ ಅಕ್ಕ, ಮೂರನೆಯವನು ನಾನು. ನಮ್ಮ ಸೋದರ ಮಾವ ಶಾಲಾ ಶಿಕ್ಷಕರಿದ್ದರು. ಅವರು ಅಣ್ಣನ ಜನ್ಮದಿನಾಂಕ ಬರೆದಿಟ್ಟಿದ್ದರು. ಯಾವುದೇ ಲೆಕ್ಕ ಮತ್ತು ವ್ಯವಹಾರದಲ್ಲಿ ಮೊದಲ ಮತ್ತು ಎರಡನೆಯದಕ್ಕೆ ಅಷ್ಟೆ ಮಹತ್ವ. ನಂತರ ಉದಾಸೀನ, ತಾತ್ಸಾರ. ನನ್ನ ಪ್ರಕರಣದಲ್ಲಿ ಕೂಡ ಅದೇ ಆಗಿದ್ದು. ನನ್ನ ಜನ್ಮದಿನಾಂಕ ಮನೆಯ ಗೋಡೆಯ ಮೇಲೆ ಕಪ್ಪು ಮಸಿಯಿಂದ ಬರೆದಿದ್ದು ಅಳಿಸಿರಬೇಕು. ಅವ್ವನಿಗೆ ಹುಟ್ಟಿದ ದಿನವಷ್ಟೆ ಗೊತ್ತು. ದಿನಾಂಕ, ತಿಂಗಳು, ವರ್ಷದ ಉಸ್ತುವಾರಿಯನ್ನು ಶಾಲಾ ಮಾಸ್ತರಿಗೆ ವರ್ಗಾಯಿಸಿದ್ದರು. ಸರ್ಕಾರಿ ದಾಖಲೆಗಳಂತೆ ನನ್ನ ಮತ್ತು ಅಣ್ಣನ ವಯಸ್ಸಿನ ಅಂತರ ಒಂದು ವರ್ಷ. ನಮ್ಮಿಬ್ಬರ ಮಧ್ಯೆ ಜನಿಸಿದ ಅಕ್ಕ ಯಾವ ತಾಯಿಯ ಗರ್ಭದಲ್ಲಿ ನವಮಾಸ ಅರಳಿದಳೊ ಗೊತ್ತಿಲ್ಲ.

ನಮ್ಮ ಮಾಸ್ತರರು ಹೆಸರು ನಾಮಕರಣ ಮಾಡುವಾಗ ಆಧುನಿಕತೆ ಕಾಣಬಹುದಾಗಿದೆ. ನನ್ನ ಜೊತೆ 1970 ಇಸವಿ ಜನ್ಮದಿನಾಂಕವಿರುವ ಮೂವರಿಗೆ ಅಯ್ಯ ಮತ್ತು ಒಬ್ಬರಿಗೆ ಅಣ್ಣ ಎಂದು ಸೇರಿಸಿದ್ದರು. 1971ನೇ ಇಸವಿಗೆ ಬರುವ ಹೊತ್ತಿಗೆ ಎರಡು ಅಯ್ಯಗಳಿಗೆ ಮಾತ್ರ ಸೀಮಿತವಾದವು. ಸರ್ವಮಂಗಳ, ಮಹಾಲಕ್ಷ್ಮೀ, ಶ್ರೀನಿವಾಸ ಮತ್ತು ಸದಾನಂದ ಎಂಬ ಆಧುನಿಕ ಹೆಸರುಗಳು ಬಂದಿವೆ.

ನಮ್ಮ ಮನೆಯಲ್ಲಿ ನನ್ನ ನಾಮಾಂಕಿತ ಕೃಷ್ಣ ಎಂದು. ಅದಕ್ಕೆಂದು ಪ್ರತ್ಯೇಕ ಶಾಸ್ತ್ರೋಕ್ತ ನಾಮಕರಣ ಕಾರ್ಯಕ್ರಮ ಇರಲಿಲ್ಲ. ಮನೆಯಲ್ಲಿ ಮಕ್ಕಳು ಬೆಳೆದಂತೆ ಒಂದು ಹೆಸರಿನಿಂದ ಕರೆಯುವುದು ವಾಡಿಕೆ ಅಷ್ಟೆ. ಆದರೆ ಶಾಲೆಗೆ ಸೇರಿದಾಗ ಅದಕ್ಕೂ ಕೂಡ ಕತ್ತರಿ ಬಿತ್ತು. ಅದು ಹೇಗೆಂದರೆ ಶಾಲೆಗೆ ಮೊದಲಿಗನಾಗಿ ಆಗಲೇ ಒಬ್ಬ ಕೃಷ್ಣನ ಅಡ್ಮಿಷನ್ ಆಗಿ ಹೋಗಿತ್ತು. ಒಂದೇ ಹೆಸರಿನ ಇಬ್ಬರು ಒಂದೇ ಕ್ಲಾಸ್‌ನಲ್ಲಿ ಓದುವುದು ಸರಿಯಲ್ಲ. ಗೊಂದಲಕ್ಕೆ ಆಸ್ಪದ ನೀಡಬಾರದೆಂದು ನಮ್ಮ ಮೇಷ್ಟ್ರು ನನ್ನ ಹೆಸರನ್ನು ಕೃಷ್ಣ ಬದಲು ಎಸ್. ಕರೀಗೌಡ ಎಂದು ಜೊತೆಯಲ್ಲಿ ಬ್ರಾಕೆಟ್‌ನಲ್ಲಿ ಕೃಷ್ಣ ಎಂದು ಬದಲಾಯಿಸಿಬಿಟ್ಟರು. ನಾಲ್ಕನೇ ತರಗತಿ ಮುಗಿದು ಟಿ.ಸಿ. ಕೊಡುವ ವೇಳೆಗೆ ಅದು ಬರೀ ಕರೀಗೌಡ ಆಗಿ ಉಳಿಯಿತು. ಈಗಲೂ ಅದೇ ಉಳಿದಿದೆ. ಇಲ್ಲಿ ಬರೀ ನನ್ನ ಹೆಸರು ಅಷ್ಟೇ ಅಲ್ಲ. ನನ್ನ ತಂದೆಯ ಹೆಸರು ಬರೀ ಸಿದ್ದೇಗೌಡ ಇದ್ದಿದ್ದು. ಹೆಸರಿನ ಹಿಂದೆ 'ಎಸ್' ಸೇರ್ಪಡೆಯಾಗಿದೆ. ಭೂಮಿಯ ಪಹಣಿಯ ದಾಖಲೆಗೆ ಮತ್ತು ಆಧಾರ್ ಕಾರ್ಡ್‌ನಲ್ಲಿ ಸಿದ್ದೇಗೌಡ ಎಂದಿದೆ ಅಷ್ಟೆ. ಅಕಸ್ಮಾತ್ ಈ ದಾಖಲೆ ನಮ್ಮೂರಿನ ಗ್ರಾಮ ಲೆಕ್ಕಾಧಿಕಾರಿ ಮತ್ತು ನಮ್ಮ ದಾಯಾದಿಗಳ ಕೈಗೆ ಸಿಕ್ಕಿದರೆ ತಪ್ಪಾಗಿ ಜಮೀನಿನ ಖಾತೆ ಮಾಡಿಸಿಕೊಂಡಿದ್ದೆವೆಂದು ಕೋರ್ಟ್‌ಗೆ ಎಳೆಯಬಹುದು.

ಶೈಕ್ಷಣಿಕ ವರ್ಷ ಪ್ರಾರಂಭವಾದಾಗ ನಾಲ್ಕನೇ ತರಗತಿಯ ಮತ್ತು ದೇಹ ಮಸ್ತಾದ ಹುಡುಗರು ಊರೊಳಗೆ ಓಡಾಡಿ, ಯಾರ್‍ಯಾರ ಮನೆ ಮುಂದೆ ಮಕ್ಕಳು ಆಟ ಆಡ್ತಾ ಇದ್ರೆ ಶಾಲೆಗೆ ಕರ್ಕೊಂಡು ಬರುತ್ತಿದ್ದರು. ಮಕ್ಕಳು, ಅಪ್ಪ, ಅಮ್ಮ ಜೊತೆ ಕುರಿ–ದನ ಮೇಯಿಸೋಕೆ ಅಂತ ಹೊರಗೆ ಹೋಗಿದ್ರೆ ಬಚಾವ್ ಆಗುತ್ತಿದ್ದರು. ಮನೆ ಹತ್ರ ಇದ್ದು ಬರ್ಲಿಲ್ಲ ಅಂದರೆ ಇಬ್ಬರು ಒಂದೊಂದು ಕೈ, ಮತ್ತಿಬ್ಬರು ಒಂದೊಂದು ಕಾಲು ಹಿಡ್ಕೊಂಡು ಆಕಾಶಕ್ಕೆ ಹೊಟ್ಟೆ ಮಾಡಿ ರಾಜ ಮರ್ಯಾದೆಯೊಂದಿಗೆ ಹೊತ್ಕೊಂಡು ಬರುತ್ತಿದ್ದೆವು. ಶಾಲೆಗೆ ಬಂದ್ರೆ ಅಡ್ಮಿಷನ್ ಆಯ್ತು ಅಂತ ಅರ್ಥ. ಶಾಲೆ ಎದುರು ಮಾಸ್ತರ ಕಣ್ಣಿಗೆ ಬಿದ್ದ ಗ್ರಾಮಸ್ಥರನ್ನು ಕರೆದು ಇವರು ಯಾರ ಮಕ್ಕಳು ಎಂದು ಕೇಳಿ ಮಕ್ಕಳ ಮತ್ತು ಪೋಷಕರ ಹೆಸರು ನಿರ್ಧಾರ ಆಗುತ್ತಿತ್ತು. ಅದು ಮಾಸ್ತರರ ಮೂಡ್ ಮತ್ತು ಆ ಕ್ಷಣದಲ್ಲಿ ಅವರಿಗೆ

